## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಮಡಿಕೇರಿ

**ಸಿ.ಸಿ.ನಂ:527/2026**

**ಮಡಿಕೇರಿ ಗ್ರಾಮಾಂತರ ಆರಕ್ಷಕ ಠಾಣೆ**

**/ವಿರುದ್ಧ/**

ಮೋಹನ್ ಪ್ರಭು ಎನ್.ಕೆ.,
ತಂದೆ: ಕಾಮಯ್ಯ ಎನ್.ಬಿ., ಪ್ರಾಯ 57 ವರ್ಷ,
ವಾಸ: ಕಡಗದಾಳು ಗ್ರಾಮ ಮತ್ತು ಅಂಚೆ,
ಮಡಿಕೇರಿ ತಾಲ್ಲೂಕು.

### ಆಪಾದನಾ ಸಾರಾಂಶ

ದಿನಾಂಕ 11.01.2026ರಂದು ಸಮಯ ಸಂಜೆ 4.30 ಗಂಟೆಗೆ ಮಡಿಕೇರಿ ಗ್ರಾಮಾಂತರ ಠಾಣಾ ಸರಹದ್ದಿಗೆ ಸೇರಿದ ಒಂಟಿಯಂಗಡಿ ಅಬ್ಯತ್ ಮಂಗಲ ಗ್ರಾಮದಲ್ಲಿರುವ ಗ್ರೀನ್ ಫೀಲ್ಡ್ ಕಾಫಿ ಎಸ್ಟೇಟ್‌ನ ಮುಂದಿನ ಚೆಟ್ಟಳ್ಳಿ-ಸಿದ್ಧಾಪುರ ಸಾರ್ವಜನಿಕ ರಸ್ತೆಯಲ್ಲಿ ಚಾಸಾ-1 ಸಜೀರ್ ಈ.ಯು. ರವರು ತಮ್ಮ ಬಾಪ್ತು ಆಟೋ ಸಂ:ಕೆಎ-12-ಸಿ-4678ರಲ್ಲಿ ಚಾಸಾ-2 ಸಲ್ಮಾನ್ ಫರಿಜ್ ಮತ್ತು ಚಾಸಾ-3 ಜಬೀರ್ ರವರನ್ನು ಕೂರಿಸಿಕೊಂಡು ಚೆಟ್ಟಳ್ಳಿಯಿಂದ ಸಿದ್ಧಾಪುರಕ್ಕೆ ಹೋಗುತ್ತಿರುವಾಗ ಆರೋಪಿಯಾದ ನೀವು ಸಿದ್ಧಾಪುರ ಕಡೆಯಿಂದ ನಿಮ್ಮ ಬಾಪ್ತು ಜೀಪು ಸಂ: ಕೆಎ-12-ಎಂಬಿ-9253ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಚಾಸಾ-1 ರವರು ಓಡಿಸುತ್ತಿದ್ದ ಆಟೋ ರಿಕ್ಷಾಕ್ಕೆ ಡಿಕ್ಕಿ ಪಡಿಸಿ ಅಪಘಾತ ಉಂಟು ಪಡಿಸಿದ್ದರಿಂದ ಎರಡೂ ವಾಹನಗಳು ಜಖಂಗೊಂಡಿದ್ದು ಆ ಮೂಲಕ ನೀವು ಬಿ.ಎನ್.ಎಸ್.ಕಲಂ 281 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲ್ಕಂಡ ದಿನಾಂಕ ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮೇಲ್ಕಂಡ ರೀತಿಯಲ್ಲಿ ಅಪಘಾತ ಮಾಡಿದ ಪರಿಣಾಮ ಚಾಸಾ-1 ರಿಂದ 3 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು ಆ ಮೂಲಕ ನೀವು ಬಿ.ಎನ್.ಎಸ್. ಕಲಂ 125(ಎ)ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೆಯದಾಗಿ, ಮೇಲ್ಕಂಡ ದಿನಾಂಕ ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮೇಲ್ಕಂಡ ರೀತಿಯಲ್ಲಿ ಅಪಘಾತ ಮಾಡಿದ ಪರಿಣಾಮ ಚಾಸಾ-1 ಮತ್ತು 2 ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು ಆ ಮೂಲಕ ನೀವು ಬಿ.ಎನ್.ಎಸ್. ಕಲಂ 125(ಬಿ)ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಪ್ರಶ್ನೆ: 1) ಈಗ ಓದಿ ಹೇಳಿದ ಆರೋಪಣೆ ಅರ್ಥವಾಗಿದೆಯೇ?

ಉತ್ತರ: ಅರ್ಥವಾಗಿದೆ.

ಪ್ರಶ್ನೆ: 2)  ತಪ್ಪು ಒಪ್ಪಿಕೊಳ್ಳುತ್ತೀರಾ? ಹಾಗಿದ್ದಲ್ಲಿ ನಿಮ್ಮ ಸಮಜಾಯಿಷಿಕೆ ಏನು?

ಉತ್ತರ: ತಪ್ಪು ಮಾಡಿಲ್ಲ, ವಿಚಾರಣೆಯಾಗಲಿ.

ಆಪಾದನೆಯನ್ನು ಆರೋಪಿತರಿಗೆ ನನ್ನ ಸಮಕ್ಷಮ ಓದಿ ಹೇಳಿ ಅಭಿಲೇಖಿಸಿರುವ ಈ ಹೇಳಿಕೆ ಅವರ ಹೇಳಿಕೆಯ ಸರಿಯಾದ ಒಕ್ಕಣೆ ಎಂದು ದೃಢೀಕರಿಸಿದ್ದೇನೆ.

ದಿನಾಂಕ 1 ನೇ ಜೂನ್ ಮಾಹೆಯ 2026 ಇಸವಿ.

ಪ್ರಧಾನ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಮಡಿಕೇರಿ.